# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 248 |
| ಸದಸ್ಯರ ಹೆಸರು | : | ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.09.2020 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ವತಿಯಿಂದ ಹೊಸೂರಿನಲ್ಲಿ ಕಟ್ಟಿದ ವಾಣಿಜ್ಯ ಮಳಿಗೆಗಳ ಸಂಕೀರ್ಣ ಕಟ್ಟಡವನ್ನು ನಿರ್ಮಿಸಿದ್ದು ಯಾವಾಗ ಮತ್ತು ಅಲ್ಲಿ ಎಷ್ಟು ಮಳಿಗೆಗಳನ್ನು ಬಾಡಿಗೆ ಕೊಡಲಾಗಿದೆ. | ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ ವತಿಯಿಂದ ಹೊಸೂರಿನಲ್ಲಿ 1969 ರಲ್ಲಿ ವಾಣಿಜ್ಯ ಮಳಿಗೆಗಳ ಸಂಕೀರ್ಣವನ್ನು ನಿರ್ಮಿಸಲಾಗಿದ್ದು, ಸದರಿ ಸಂಕೀರ್ಣದಲ್ಲಿ ನೆಲಮಹಡಿಯಲ್ಲಿ 32, ಮೊದಲನೇ ಮಹಡಿಯಲ್ಲಿ 16 ಹಾಗೂ ಎರಡನೇ ಮಹಡಿಯಲ್ಲಿ 17 ಒಟ್ಟು 65 ಮಳಿಗೆಗಳಿದ್ದು, ಪ್ರಸ್ತುತ ನೆಲ ಮಹಡಿಯ 32 ಮಳಿಗೆಗಳನ್ನು ಬಾಡಿಗೆ ನೀಡಲಾಗಿದೆ. |
| ಆ) | ಶಿಥಿಲಾವಸ್ಥೆಯಲ್ಲಿರುವ ಸದರಿ ಕಟ್ಟಡವನ್ನು ತೆರವುಗೊಳಿಸಿ ಅದನ್ನು ಸಂಪೂರ್ಣವಾಗಿ ಒಡೆದು ಹಾಕಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ಹೊಸೂರ ವಾಣಿಜ್ಯ ಸಂಕೀರ್ಣ ಸುಮಾರು 51 ವರ್ಷಗಳ ಹಳೆಯ ಕಟ್ಟಡವಾಗಿದ್ದು ಬಹಳಷ್ಟು ಶಿಥಿಲಗೊಂಡಿರುತ್ತದೆ ಹಾಗೂ ದುರಸ್ತಿಯನ್ನು ಮಾಡಿದರೂ ಫಲಪ್ರದ ವಾಗುವುದಿಲ್ಲ. ಕಟ್ಟಡದ ಡೆಪ್ರಿಸಿಯೇಶನ್ ಮೊತ್ತವು ಸೊನ್ನೆಯನ್ನು ತಲುಪಿರುತ್ತದೆ. ಆದ್ದರಿಂದ ಸದರಿ ಕಟ್ಟಡವನ್ನು ನೆಲಸಮಗೊಳಿಸಿ ಅದೇ ಜಾಗದಲ್ಲಿ ಹಾಗೂ ಖಾಲಿ ಇದ್ದ ಜಾಗವನ್ನು ಬಳಿಸಿಕೊಂಡು ಒಂದು ಉತ್ತಮ ಕಟ್ಟಡ ಕಟ್ಟಬೇಕೆಂದು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯ ಠರಾವು ನಂ.711 ದಿ:15-05-2017 ರಂದು ತೀರ್ಮಾನಿಸಲಾಗಿರುತ್ತದೆ.<br>ಸದರಿ ಕಟ್ಟಡವನ್ನು ತೆರವುಗೊಳಿಸಿ ಹೊಸ ಕಟ್ಟಡವನ್ನು ನಿರ್ಮಿಸಲು ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ನಿರ್ಧರಿಸಲಾಗಿತ್ತು. ಆದರೆ, ಸದರಿ ಯೋಜನೆಯನ್ನು ಕೈಬಿಡಲಾಗಿದೆ. |

| | | |
|---|---|---|
| ಇ) | ಸದರಿ ಕಟ್ಟಡದಲ್ಲಿ ಡಾ|| ಎಚ್.ಟಿ ಗಂಗಲ್ ವೈದ್ಯಕೀಯ ಸಂಶೋಧನಾ ಕೇಂದ್ರ ಪ್ರಾರಂಭವಾಗಿ ಸುಮಾರು ವರ್ಷ ಕಳೆದರೂ ಇನ್ನೂವರೆಗೇ ಆ ಕಟ್ಟಡ ಸರಿಯಾದ ರೀತಿಯಿಂದ ದುರಸ್ತಿ ಆಗದೇ ಸಂಪೂರ್ಣ ಶಿಥಿಲಾವಸ್ಥೆಯಲ್ಲಿರುವುದರಿಂದ ತಕ್ಷಣ ಸರ್ಕಾರ ಕ್ರಮ ಕೈಗೊಳ್ಳುವುದೇ? | ಡಾ|| ಎಚ್.ಟಿ ಗಂಗಲ್ ಇವರು ಪಾಲಿಕೆಯ ವಾಣಿಜ್ಯ ಮಳಿಗೆಯ ಬಾಡಿಗೆ ಹಣ ರೂ.64,62,481/-ಗಳನ್ನು ಸಂದಾಯ ಮಾಡದೇ ಬಾಕಿ ಉಳಿಸಿಕೊಂಡಿದ್ದರಿಂದ ಒಂದನೇ ಹಾಗೂ ಎರಡನೇ ಮಹಡಿಗಳನ್ನು ದಿನಾಂಕ:-19-10-2006 ರಂದು ಇದ್ದ ಸ್ಥಿತಿಯಲ್ಲಿಯೇ ಬೀಗ ಮುದ್ರೆ ಹಾಕಿ ಪಾಲಿಕೆಯ ವಶಕ್ಕೆ ಪಡೆಯಲಾಯಿತು. ಬಾಕಿ ವಾಣಿಜ್ಯ ಮಳಿಗೆಯ ಬಾಡಿಗೆ ವಸೂಲಿ ಮಾಡಲು ಡಾ:ಎಚ್.ಟಿ.ಗಂಗಲ್ ಇವರಿಗೆ ಸೇರಿದ ಸ್ವತ್ತಿನ ಮೇಲೆ ಋಣಭಾರವನ್ನು ದಾಖಲಿಸಲಾಗಿದೆ ಹಾಗೂ ಕಟ್ಟಡದ ಸ್ಥಿರತೆಯ ಬಗ್ಗೆ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆಯಿಂದ ಲೋಕೋಪಯೋಗಿ ಇಲಾಖೆಗೆ ದಿನಾಂಕ:17-04-2018 ಮತ್ತು 28-08-2019 ರಂದು ಪತ್ರವನ್ನು ಬರೆಯಲಾಗಿದ್ದು ವರದಿ ಬಂದ ನಂತರ ತೆರವುಗೊಳಿಸಲು ಪಾಲಿಕೆ ವತಿಯಿಂದ ಕ್ರಮ ಕೈಗೊಳ್ಳಲಾಗುವುದು |

ಕಡತ ಸಂಖ್ಯೆ: ನಅಇ 37 ಎಹೆಚ್‌ಡಿ 2020(ಇ)

**(ಬಿ.ಎ. ಬಸವರಾಜ)**
ನಗರಾಭಿವೃದ್ಧಿ ಸಚಿವರು